# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 17

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 04.07.2023

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಬೆಳೆಯುವ ತೋಟಗಾರಿಕೆ ಬೆಳೆಗಳು ಯಾವುವು; | ವಿಜಯಪುರ ಜಿಲ್ಲೆಯಲ್ಲಿ ಬೆಳೆಯುವ ತೋಟಗಾರಿಕೆ ಬೆಳೆಗಳು ಈ ಕೆಳಗಿನಂತಿವೆ:-<br>**ಹಣ್ಣಿನ ಬೆಳೆಗಳು:** ದ್ರಾಕ್ಷಿ, ಬಾಳೆ, ಬಾರೆ, ಸೀತಾಫಲ, ಪೇರಲ, ಡ್ರ್ಯಾಗನ್, ಮಾವು, ಪಪಾಯಿ, ದಾಳಿಂಬೆ, ಸಪೋಟ, ಲಿಂಬೆ, ಮೋಸಂಬಿ, ಕಲ್ಲಂಗಡಿ ಇತ್ಯಾದಿ.<br>**ತರಕಾರಿ ಬೆಳೆಗಳು:** ಹಾಗಲಕಾಯಿ, ಸೋರೆಕಾಯಿ, ಬದನೆಕಾಯಿ ಎಲೆಕೋಸು, ದೊಡ್ಡ ಮೆಣಸಿನಕಾಯಿ, ಕ್ಯಾರೆಟ್, ಹೂಕೋಸು, ಮೆಣಸಿನಕಾಯಿ, ಸೌತೆಕಾಯಿ, ಬೆಂಡೆಕಾಯಿ, ಈರುಳ್ಳಿ, ಮೂಲಂಗಿ, ಹಿರೇಕಾಯಿ, ಸಿಹಿಗೆಣಸು, ಮರಗೆಣಸು, ಟೊಮಟೊ ಇತ್ಯಾದಿ<br>**ತೋಟದ ಬೆಳೆಗಳು:** ತೆಂಗು, ತಾಳೆಬೆಳೆ, ವಿಳ್ಳೆಯದೆಲೆ, ಹುಣಸೆ ಇತ್ಯಾದಿ.<br>**ಸಾಂಬಾರ ಬೆಳೆಗಳು:** ಕೆಂಪು ಮೆಣಸಿನಕಾಯಿ, ಕೊತ್ತಂಬರಿ, ಬೆಳ್ಳುಳ್ಳಿ ಶುಂಠಿ, ಅರಶಿನ, ಇತ್ಯಾದಿ<br>**ಔಷಧಿ ಮತ್ತು ಸುಗಧ ದ್ರವ್ಯ ಸಸ್ಯಗಳು**: ಲಿಂಬೆ ಹುಲ್ಲು, ಅಲೋವೇರಾ ಇತ್ಯಾದಿ<br>**ಹೂ-ಬೆಳೆಗಳು:** ಸೇವಂತಿಗೆ, ಮಲ್ಲಿಗೆ, ಚೆಂಡುಹೂವು, ಸುಗಂಧರಾಜ ಹಾಗೂ ಇತರೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತದೆ. |
| ಆ) | ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:<br>1. ಇಲಾಖೆ ಯೋಜನೆಗಳಡಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಸಾವಯುವ ಕೃಷಿ, ಹನಿ ನೀರಾವರಿ, ನೀರು ಸಂಗ್ರಹಣಾ ಘಟಕ, ಯಾಂತ್ರಿಕರಣ, ಪುನಶ್ಚೇತನ, ಸಂಸ್ಕರಣೆ, ಮೌಲ್ಯವರ್ಧನೆ, ನರ್ಸರಿ ಸ್ಥಾಪನೆ, ಸಂರಕ್ಷಿತ ಬೇಸಾಯ, ಶೀಥಲ ಗೃಹ ಘಟಕ, ಪ್ಯಾಕ್ ಹೌಸ್ ಘಟಕ, ಶೇಖರಣಾ ಘಟಕ, ಕೊಳವೆ ಬಾವಿ, ಡೀಸಲ್ /ವಿದ್ಯುತ್ ಚಾಲಿತ ಪಂಪ್ ಸೆಟ್, ತೋಟಗಾರಿಕೆ ಬೆಳೆಗಳ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮಗಳಾದ ನೀರಿನಲ್ಲಿ ಕರಗುವ ರಸಗೊಬ್ಬರ ಘಟಕ, ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆ ಸ್ಪೆಷಲ್, ಹಣ್ಣಿನ ಗಿಡಗಳ ಮೇಲಾವರಣ ನಿರ್ವಹಣೆ, ಬೆಳೆ/ ಹಣ್ಣು/ ಹೂವು ಹೊದಿಕೆ, ಮಾರುಕಟ್ಟೆ ಮೂಲಭೂತ ಸೌಕರ್ಯಗಳ ನಿರ್ಮಾಣ ಮುಂತಾದವು ಅಭಿವೃದ್ಧಿಪರ ಘಟಕಗಳಿಗೆ ಸಹಾಯಧನ ನೀಡಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. |

| | | |
|---|---|---|
| | | 2. ದ್ರಾಕ್ಷಿ ಬೆಳೆಗಾಗರಿಗೆ ಅನುಕೂಲವಾಗಲು ನಬಾರ್ಡ್ ನೆರವಿನಡಿ ಅಂದಾಜು 10,000ಮೆ.ಟನ್ ಸಾಮರ್ಥ್ಯದ ಶೀಥಲ ಗೃಹ ಹಾಗೂ ಸಂಸ್ಕರಣ ಘಟಕ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ.<br>3. ಇಲಾಖೆಯಲ್ಲಿ ಉತ್ಪಾದಿಸಲಾಗುವ ಗುಣಮಟ್ಟದ ಸಸಿ/ಕಸಿ ವಿತರಣೆ, ಜೈವಿಕ ಪರಿಕರಗಳನ್ನು ಇಲಾಖಾ ದರದಲ್ಲಿ ವಿತರಣೆ ಮಾಡಲಾಗುತ್ತಿದೆ.<br>4. ರೈತರ ಉತ್ಪನ್ನಗಳಿಗೆ ಬೆಲೆ ಇಳಿಮುಖವಾದ ಉತ್ಪನ್ನಗಳನ್ನು ಶೇಖರಿಸಲು ಶೈತ್ಯಾಗರಗಳ ಸೌಲಭ್ಯವನ್ನು ನೀಡಲಾಗಿದೆ.<br>5. ಮಣ್ಣು, ನೀರು ಮತ್ತು ಎಲೆ ವಿಶ್ಲೇಷಣೆ ಮಾಡಿ ಪೋಷಕಾಂಶಗಳ ಶಿಫಾರಸ್ಸು ಮಾಡಲಾಗುತ್ತಿದೆ.<br>6. ಹೋಬಳಿ ಮಟ್ಟದ ಅಧಿಕಾರಿಗಳು ಗ್ರಾಮಸಭೆಗಳಲ್ಲಿ ಇಲಾಖಾ ಯೋಜನೆಗಳ ಬಗ್ಗೆ ಮಾಹಿತಿ ನೀಡುತ್ತಿದ್ದು, ಇಲಾಖಾ ವೆಬ್ ಸೈಟ್, ರೇಡಿಯೋ, ದೂರದರ್ಶನ, ಕರಪತ್ರಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ.<br>7. ಆಧುನಿಕ ರೀತ್ಯಾ ಬದಲಾವಣೆಗಳ ತಾಂತ್ರಿಕ ಮಾಹಿತಿಯ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಮಾಸಿಕ ತಾಂತ್ರಿಕ ಕೈಪಿಡಿ ಹಾಗೂ ರೈತ ಉತ್ಪಾದಕಾ ಸಂಸ್ಥೆ, ಉತ್ಕೃಷ್ಟ ಕೇಂದ್ರ, ರಾಜ್ಯ ಮತ್ತು ಕೇಂದ್ರ ಸಂಶೋಧನಾ ಕೇಂದ್ರಗಳಲ್ಲಿ ರೈತರಿಗೆ ತರಬೇತಿ ಹಾಗೂ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುತ್ತಿದೆ.<br>8. ವಿಜಯಪುರ ಜಿಲ್ಲೆಗೆ ಹತ್ತಿರವಾಗಿ ತೋಟಗಾರಿಕೆ ಬೆಳೆಗಾರರಿಗೆ ಅನುಕೂಲವಾಗುವಂತೆ ಬಾಗಲಕೋಟೆ ಜಿಲ್ಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.<br>9. ಇಂಡಿ ತಾಲ್ಲೂಕಿನಲ್ಲಿ ನಿಂಬೆ ಬೆಳೆಗಾಗರ ಅನುಕೂಲಕ್ಕಾಗಿ ನಿಂಬೆ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಗಿದೆ.<br>10. ದ್ರಾಕ್ಷಿ ಬೆಳೆಗಾರರಿಗೆ ಅನುಕೂಲವಾಗಲು ದ್ರಾಕ್ಷಿ ಹಾಗೂ ವೈನ್ ಮಂಡಳಿಯನ್ನು ವಿಜಯಪುರ ಜಿಲ್ಲೆಯಲ್ಲಿ ಸ್ಥಾಪಿಲಾಗಿರುತ್ತದೆ.<br>11. ರೈತರ ತಾಕುಗಳಿಗೆ ನಿರಂತರವಾಗಿ ಕ್ಷೇತ್ರಭೇಟಿ, ಕೃಷಿ/ತೋಟಗಾರಿಕೆ ಮೇಳ, ಹಾಗೂ ಪ್ರವಾಸಗಳ ಮೂಲಕ ಅಧಿಕಾರಿಗಳು ಮಾಹಿತಿಯನ್ನು ನೀಡುತ್ತಿರುತ್ತಾರೆ.<br>ಈ ಮೂಲಕ ತೋಟಗಾರಿಕೆ ಬೆಳೆಗಳನ್ನು ಹೆಚ್ಚು ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. |

HORTI 205 HGM 2023

S. S. Mallikarjun

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು